# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/Special Summer Camp/143/2026-27/462 ದಿನಾಂಕ:15.06.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

**ವಿಷಯ: ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಏಕತೆ-ಸಾಮಾಜಿಕ ಸಾಮರಸ್ಯ ಶಿಬಿರಕ್ಕೆ ಸ್ಕೌಟ್ಸ್-ಗೈಡ್ಸ್, ರೋವರ್ಸ್ -ರೇಂಜರ್ಸ್‌ಗಳನ್ನು ನಿಯೋಜಿಸುವ ಬಗ್ಗೆ**

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಮತ್ತು ಉಡುಪಿ ಜಿಲ್ಲಾ ಸಂಸ್ಥೆ ಹಾಗೂ ವಿಜಯ ಮಕ್ಕಳ ಕೂಟದ ಆಂಗ್ಲ ಮಾಧ್ಯಮ ಶಾಲೆ, ವಂಡ್ಸೆ, ಬೈಂದೂರು ಇವರ ಸಹಯೋಗದೊಂದಿಗೆ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ಯೋಜಿತ ಕಾರ್ಯಕ್ರಮಗಳಾದ ಭಗವತ್ ಗೀತೆ, ಕುರಾನ್, ಬೈಬಲ್ ಬಗ್ಗೆ ಮಾಹಿತಿಗಳನ್ನು ನೀಡಲು ರಾಜ್ಯ ಮಟ್ಟದ ಏಕತೆ-ಸಾಮಾಜಿಕ ಸಾಮರಸ್ಯ ಶಿಬಿರವನ್ನು **ದಿನಾಂಕ: 27.06.2026 ರಿಂದ 29.06.2026ರ ವರೆಗೆ** ವಿಜಯ ಮಕ್ಕಳ ಕೂಟದ ಆಂಗ್ಲ ಮಾಧ್ಯಮ ಶಾಲೆ, ವಂಡ್ಸೆ, ಬೈಂದೂರು, ಉಡುಪಿ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| | |
|---|---|
| ಶಿಬಿರ | ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಏಕತೆ-ಸಾಮಾಜಿಕ ಸಾಮರಸ್ಯ ಶಿಬಿರ |
| ದಿನಾಂಕ | ದಿನಾಂಕ:27.06.2026 ರಿಂದ 29.06.2026ರ ವರೆಗೆ |
| ವರದಿ ಮಾಡುವ ಸ್ಥಳ | ವಿಜಯ ಮಕ್ಕಳ ಕೂಟದ ಆಂಗ್ಲ ಮಾಧ್ಯಮ ಶಾಲೆ, ವಂಡ್ಸೆ, ಬೈಂದೂರು, ಉಡುಪಿ ಜಿಲ್ಲೆ |
| ಹಾಜರಾಗುವ ವೇಳೆ ಮತ್ತು ದಿನಾಂಕ | ದಿನಾಂಕ: 27.06.2026 ರಂದು ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು. (ಶಿಬಿರಕ್ಕೆ ತಡವಾಗಿ ಬರುವಂತಿಲ್ಲ.) |
| ಬಿಡುಗಡೆ ಮಾಡುವ ದಿನಾಂಕ | ದಿನಾಂಕ: 29.06.2026 ಮಧ್ಯಾಹ್ನ ಊಟದ ನಂತರ ಬಿಡುಗಡೆ |
| ನೊಂದಣಿ & ಶಿಬಿರ ಶುಲ್ಕ | ಯಾವುದೇ ಶುಲ್ಕ ಇರುವುದಿಲ್ಲ |
| ಆನ್‌ಲೈನ್ ನೊಂದಾವಣಿ | ಭಾಗವಹಿಸುವ ಹಿರಿಯ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಈ ಲಿಂಕ್ https://zfrmz.in/7CO7XEJSgHtjVWVY8WaOನಲ್ಲಿ ನೊಂದಾವಣಿ ಮಾಡಿಕೊಳ್ಳುವುದು. |
| ತರಬೇಕಾದ ಸಾಮಾಗ್ರಿಗಳು | ಶಿಬಿರಕ್ಕೆ ಅವಶ್ಯಕವಿರುವ ಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ, ಬದಲಿ ಉಡುಪು, ತಟ್ಟೆ, ಲೋಟೆ, ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣಿಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿ ಉಡುಪು, ದೈಹಿಕ ವೈದ್ಯಕೀಯ ಪ್ರಮಾಣ ಪತ್ರ |
| ಪ್ರತಿ ಜಿಲ್ಲೆಗೆ ನಿಗಧಿಪಡಿಸಿರುವ ಕೋಟಾ | ಪ್ರತಿ ಜಿಲ್ಲೆಯಿಂದ ನಿಪುಣ್ ತರಬೇತಿ ಹೊಂದಿದ 10 ರೋವರ್ಸ್/ರೇಂಜರ್ಸ್ /ದಳನಾಯಕರು/ಹಿರಿಯ ಸ್ಕೌಟ್/ಗೈಡ್‌ಗಳನ್ನು ಸಹ ನಿಯೋಜಿಸುವುದು. |
| ಶಿಬಿರದ ವಿಶೇಷತೆಗಳು | ಧಾರ್ಮಿಕ ವಿದ್ವಾಂಸರಿಂದ ಉಪನ್ಯಾಸ ಮತ್ತು ಧಾರ್ಮಿಕ ಸ್ಥಳಗಳಿಗೆ ಭೇಟಿ ಮಾಡಿಸಲಾಗುವುದು |

| | |
|---|---|
| ಪ್ರಯಾಣ ವೆಚ್ಚ | ಆಯಾಯ ಕಾಲೇಜಿನ ರೋವರ್ಸ್-ರೇಂಜರ್ಸ್/ ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. |
| ಶಿಬಿರ ತಲುಪುವ ವಿಧಾನ | ಕುಂದಾಪುರದಿಂದ ಕೊಲ್ಲೂರಿಗೆ ಹೋಗುವ ದಾರಿಯಲ್ಲಿ ವಂಡ್ಸೆಯು 15 ಕಿ.ಮೀ. ದೂರವಿದೆ, ಅಲ್ಲಿಂದ 1 1/2 ಕಿ.ಮೀ. ದೂರಕ್ಕೆ ಶಿಬಿರ ಸ್ಥಳವಿದೆ. ಕೊಲ್ಲೂರಿಗೆ ಹೋಗುವ ಬಸ್ಸಿನಲ್ಲಿ ಪ್ರಯಾಣಿಸಿ, ವಂಡ್ಸೆಯಲ್ಲಿ ಇಳಿಯಬೇಕು, ವಂಡ್ಸೆಯಿಂದ ಆಟೋ ರಿಕ್ಷಾ ಮೂಲಕ ಶಿಬಿರ ಕೇಂದ್ರಕ್ಕೆ ತಲುಪುವುದು. |
| ಊಟ ಮತ್ತು ವಸತಿ ವ್ಯವಸ್ಥೆ | ಉಡುಪಿ ಜಿಲ್ಲಾ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ |
| ಸಂಪರ್ಕಿಸಬೇಕಾದ ಸಂಖ್ಯೆ | ಶ್ರೀ. ಆನಂದ ಅಡಿಗ, ಜಿಲ್ಲಾ ಕಾರ್ಯದರ್ಶಿ, ಉಡುಪಿ – 9741803446<br>ಶ್ರೀಮತಿ ಸುಮನ್ ಶೇಖರ್, ಎಎಸ್‌ಒಸಿ, ಉಡುಪಿ – 9844994576<br>ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ – 9448914540 |

ಭಾಗವಹಿಸುವ ರೋವರ್ಸ್-ರೋವರ್ಸ್/ಸ್ಕೌಟ್ಸ್-ಗೈಡ್ಸ್ ಮತ್ತು ದಳನಾಯಕರುಗಳ ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜಿನ ರೋವರ್ಸ್-ರೇಂಜರ್ಸ್/ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. ಆಸಕ್ತ ರೋವರ್ಸ್-ರೇಂಜರ್ಸ್/ಸ್ಕೌಟ್ಸ್-ಗೈಡ್ಸ್‌ಗಳನ್ನು ಆಯ್ಕೆ ಮಾಡಿ, ಮೇಲ್ಕಂಡ ಶಿಬಿರಕ್ಕೆ ನಿಯೋಜಿಸಲು ಕೋರಲಾಗಿದೆ. ಭಾಗವಹಿಸುವವರುಗಳ ವಿವರಗಳನ್ನು ದಿನಾಂಕ: 25.06.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ತಪ್ಪದೇ ಕಳುಹಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿ ಮಾಹಿತಿಗಾಗಿ:**

1. ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್ಸ್)/(ಗೈಡ್ಸ್)
2. ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಉಡುಪಿ ಜಿಲ್ಲೆ
3. ಎ.ಎಸ್.ಒ.ಸಿ/ಡಿಒ/ಡಿಒಸಿ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳು, ಭಾ.ಸ್ಕೌ&ಗೈ, ಇವರುಗಳ ಸೂಕ್ತ ಕ್ರಮಕ್ಕಾಗಿ